# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: LP.No.Ad.Com/WST/0444/19-20

ಸಹಾಯಕ ನಿರ್ದೇಶಕರವರ ಕಛೇರಿ.
ನಗರ ಯೋಜನೆ (ಪಶ್ಚಿಮ)
ಭಾಷ್ಯಂ ಪಾರ್ಕ್. ಶೇಷಾದ್ರಿಪುರಂ.
ಬೆಂಗಳೂರು.
ದಿನಾಂಕ: 12-10-2020

ಸಹಾಯಕ ನಿರ್ದೇಶಕರು (ಪಶ್ಚಿಮ) ನ.ಯೋ. ಬೃ.ಬೆಂ.ಮ.ಪಾ.
ನಂ.............
ತಾ.............

ಅನುಸೂಚಿ-(VII)
(ಉಪವಿಧಿ ಸಂಖ್ಯೆ: 5.3)
"ಪ್ರಾರಂಭಿಕ ಪ್ರಮಾಣ ಪತ್ರ"

ವಿಷಯ: ಸ್ವತ್ತಿನ ಸಂಖ್ಯೆ: 9(ಹಳೆ ನಂ. 187). 1ನೇ ಮುಖ್ಯರಸ್ತೆ. ಮಹಾಲಕ್ಷ್ಮೀಪುರ ಬಡಾವಣೆ. ಬೆಂಗಳೂರು ಇಲ್ಲಿ ನಿರ್ಮಿಸಲಾಗುತ್ತಿರುವ ವಾಣಿಜ್ಯ ಮತ್ತು ಹಾಸ್ಟೆಲ್ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ: 1. ನಕ್ಷೆ ಮಂಜೂರಾತಿ ಸಂಖ್ಯೆ: Ad.Com/WST/0444/19-20 Dated: 13-09-2020
2. ಅರ್ಜಿದಾರರ ಮನವಿ ದಿನಾಂಕ: 28/09/2020
3. ದಿನಾಂಕ: 07/10/2020 ರ ನಕ್ಷೆ ಮಂಜೂರಾತಿ ಸಮಿತಿ ಸಭೆಯ ನಡವಳಿ.

*****

ವಾರ್ಡ್ ಸಂಖ್ಯೆ-67 ರಲ್ಲಿನ ಸ್ವತ್ತಿನ ಸಂಖ್ಯೆ: 9(ಹಳೆ ನಂ. 187). 1ನೇ ಮುಖ್ಯರಸ್ತೆ. ಮಹಾಲಕ್ಷ್ಮೀಪುರ ಬಡಾವಣೆ. ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ತಳ+ನೆಲ+ಮೊದಲನೇ+ಎರಡನೇ+ಟೆರೇಸ್ ಅಂತಸ್ತುಗಳ ವಾಣಿಜ್ಯ ಮತ್ತು ಹಾಸ್ಟೆಲ್ ಕಟ್ಟಡಕ್ಕೆ ಈ ಕಛೇರಿಯಿಂದ ಎಲ್.ಪಿ.ಸಂಖ್ಯೆ. Ad.Com/WST/0444/19-20 ದಿನಾಂಕ: 13/09/2019 ರಂದು ನಕ್ಷೆ ಮಂಜೂರಾತಿ ನೀಡಲಾಗಿದೆ. ಸದರಿ ವಾಣಿಜ್ಯ ಮತ್ತು ಹಾಸ್ಟೆಲ್ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ಕಟ್ಟಡದ ಸ್ಥಳವನ್ನು ದಿನಾಂಕ: 30/09/2020 ರಂದು ಸ್ಥಳ ಪರಿಶೀಲಿಸಿದ್ದು. ವಲಯ ನಿಯಮಾವಳಿಯಂತೆ ಹಾಗೂ ಮಂಜೂರಾತಿ ನಕ್ಷೆಯಂತೆ ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ. ಕಂಬಗಳನ್ನು ಅಳವಡಿಸಿರುತ್ತಾರೆ. ಉಲ್ಲೇಖ (3) ರಂತೆ. ಸದರಿ ಸ್ವತ್ತಿಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಪಶ್ಚಿಮ ವಲಯದ ನಕ್ಷೆ ಮಂಜೂರಾತಿ ಸಮಿತಿಯು ಅನುಮೋದಿಸಿರುವ ಮೇರೆಗೆ. ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ. 63.000/-(D.D.No.211340, Dt: 08/10/2020, IDFC Bank) ಗಳನ್ನು ಅರ್ಜಿದಾರರು ಪಾವತಿಸಿದ್ದು. ಸದರಿ ಮೊತ್ತದ ಡಿ.ಡಿ.ಯನ್ನು ರಸೀತಿ ಸಂಖ್ಯೆ:-RE-ifms210-TP/000032. ದಿನಾಂಕ: 09/10/2020 ರಂದು ಸಂದಾಯಿಸಿಕೊಳ್ಳಲಾಗಿದೆ.

Scanned with CamScanner

ವಾಣಿಜ್ಯ ಮತ್ತು ಹಾಸ್ಟೆಲ್ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ನೀಡಲಾಗಿದೆ.

1. ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು. ಉದ್ದೇಶಿತ ಕಟ್ಟಡದಲ್ಲಿ ವಲಯ ನಿಯಮಾವಳಿ ಪರಿಮಿತಿಯೊಳಗೆ ಯಾವುದೇ ಬದಲಾವಣೆ ಮಾಡಲು ಉದ್ದೇಶಿಸಿದ್ದಲ್ಲಿ, ನಿಗಧಿತ ಅವಧಿಯೊಳಗೆ ಅಗತ್ಯ ಮಾರ್ಪಾಡು ನಕ್ಷೆ ಪಡೆದು ನಂತರ ಕಾಮಗಾರಿಯನ್ನು ಮುಂದುವರೆಸುವುದು.
2. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ, ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
4. ಕಟ್ಟಡ ಕಾಮಗಾರಿ ಸ್ಥಳದಲ್ಲಿ ಮಂಜೂರಾತಿ ನಕ್ಷೆಯನ್ನು ಪ್ರದರ್ಶಿಸತಕ್ಕದ್ದು.
5. ಸದರಿ ಕಟ್ಟಡದಲ್ಲಿ ಮಂಜೂರಾತಿ ನಕ್ಷೆಯಂತೆ ಅಗತ್ಯ ವಾಹನ ನಿಲುಗಡೆಗೆ ಜಾಗವನ್ನು ಕಾಯ್ದಿರಿಸಿಕೊಳ್ಳುವುದು.

12/10/2020.

ಸಹಾಯಕ ನಿರ್ದೇಶಕರು
ನಗರ ಯೋಜನೆ (ಪಶ್ಚಿಮ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಇವರಿಗೆ:-
ಶ್ರೀ. ಹೆಚ್ ಎನ್ ಸಂಪತ್‌ಕುಮಾರ್ ಮತ್ತು ಶಶಿಕಲಾ.
ನಂ-9(ಹಳೆಯ ನಂ-187), 1 ನೇ ಮುಖ್ಯ ರಸ್ತೆ
ಮಹಾಲಕ್ಷ್ಮೀಪುರ ಬಡಾವಣೆ ವಾರ್ಡ್ ಸಂಖ್ಯೆ:67
ಬೆಂಗಳೂರು

Scanned with CamScanner